# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 977

ಮಾನ್ಯ ಸದಸ್ಯರ ಹೆಸರು : ಶ್ರೀ ಬಿ.ಜಿ.ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವ ದಿನಾಂಕ : 20.08.2025

ಉತ್ತರಿಸುವ ಸಚಿವರು : ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಲಬುರ್ಗಿ, ಯಾದಗಿರಿ ಜಿಲ್ಲೆಗಳ ವ್ಯಾಪ್ತಿಯಲ್ಲಿ ಅಮೃತ ಸ್ವಾಭಿಮಾನಿ ಕುರಿಗಾಹಿ ಯೋಜನೆಯಡಿ ಘಟಕ ಸ್ಥಾಪನೆಗೆ ಕಳೆದ 2 ವರ್ಷಗಳಲ್ಲಿ ಆಯ್ಕೆಯಾಗಿರುವ ಕುರಿಗಾಹಿಗಳ ಸಂಖ್ಯೆ ಎಷ್ಟು; | ಕಲಬುರ್ಗಿ, ಯಾದಗಿರಿ ಜಿಲ್ಲೆಗಳ ವ್ಯಾಪ್ತಿಯಲ್ಲಿ ಅಮೃತ ಸ್ವಾಭಿಮಾನಿ ಕುರಿಗಾಹಿ ಯೋಜನೆಯಡಿ ಘಟಕ ಸ್ಥಾಪನೆಗೆ ಕಳೆದ 2 ವರ್ಷಗಳಲ್ಲಿ ಆಯ್ಕೆಯಾಗಿರುವ ಕುರಿಗಾಹಿಗಳ ಸಂಖ್ಯೆ:**725** ವಿವರ ಈ ಕೆಳಕಂಡಂತಿದೆ.<br><table><tr><th>ವರ್ಷ</th><th>ಜಿಲ್ಲೆ</th><th>ಫಲಾನುಭವಿ ಸಂಖ್ಯೆ</th></tr><tr><td rowspan="2">2023-24</td><td>ಕಲಬುರಗಿ</td><td>288</td></tr><tr><td>ಯಾದಗಿರಿ</td><td>399</td></tr><tr><td rowspan="2">2024-25</td><td>ಕಲಬುರಗಿ</td><td>38</td></tr><tr><td>ಯಾದಗಿರಿ</td><td>0</td></tr><tr><td>ಒಟ್ಟು</td><td></td><td>725</td></tr></table> |
| ಆ) | ಆಯ್ಕೆಯಾದ ಕುರಿಗಾಹಿ ಸದಸ್ಯರಿಗೆ ಸಹಾಯಧನ ನೀಡಲಾಗುವುದೇ ನೀಡುವುದಿದ್ದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ನೀಡಲಾಗುವ ಸಹಾಯಧನ ಎಷ್ಟು; (ವಿವರ ಒದಗಿಸುವುದು) | ಆಯ್ಕೆಯಾದ ಕುರಿಗಾಹಿ ಸದಸ್ಯರಿಗೆ ಸಹಾಯಧನ ನೀಡಲಾಗುವುದು.ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ನೀಡಲಾಗಿರುವ ಸಹಾಯಧನದ ವಿವರ ಈ ಕೆಳಕಂಡಂತಿದೆ.<br>• 20+1- ಕುರಿ/ಮೇಕೆ ಘಟಕದ ವೆಚ್ಚ ರೂ.1,75,000/-<br>• NCDC ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮದ ವತಿಯಿಂದ ಸಾಲ ಶೇ.50%- ರೂ.87,500/-<br>• ರಾಜ್ಯ ಸರ್ಕಾರದ ಸಹಾಯ ಧನ ಶೇ.25%- ರೂ.43,750/-<br>• ಫಲಾನುಭವಿಗಳ ವಂತಿಕೆ/ಬ್ಯಾಂಕ್ ಸಾಲ ಶೇ.25% ರೂ.43,750/- |

| | | |
|---|---|---|
| ಇ) | ಇದುವರೆಗೂ ಅಮೃತ ಸ್ವಾಭಿಮಾನಿ ಕುರಿಗಾಹಿ ಯೋಜನೆಯಡಿಯಲ್ಲಿ ಸಲ್ಲಿಕೆಯಾಗಿರುವ ಅರ್ಜಿಗಳ ಸಂಖ್ಯೆ ಎಷ್ಟು; ಫಲಾನುಭವಿಗಳ ಆಯ್ಕೆಗೆ ಸರ್ಕಾರ ನಿಗದಿ ಮಾಡಿರುವ ಮಾನದಂಡಗಳೇನು? (ವಿವರ ನೀಡುವುದು) | 2023-24 ರಿಂದ ಇದುವರೆಗೂ ಅಮೃತ ಸ್ವಾಭಿಮಾನಿ ಕುರಿಗಾಹಿ ಯೋಜನೆಯಡಿಯಲ್ಲಿ ಕಲಬುರ್ಗಿ ಮತ್ತು ಯಾದಗಿರಿ ಜಿಲ್ಲೆಯಿಂದ ಸಲ್ಲಿಕೆಯಾಗಿರುವ ಅರ್ಜಿಗಳ ಸಂಖ್ಯೆ:1030. ಈ ಎಲ್ಲಾ ಫಲಾನುಭವಿಗಳಿಗೆ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿರುತ್ತದೆ.<br><br>ಅಮೃತ ಸ್ವಾಭಿಮಾನಿ ಕುರಿಗಾಹಿ ಯೋಜನೆಯನ್ನು ಅನುಷ್ಠಾನಗೊಳಿಸಲು (ಘಟಕ 20+1) ಅನುಸರಿಸುತ್ತಿರುವ ಮಾನದಂಡಗಳು:<br>➢ ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತದೊಂದಿಗೆ ಸಂಯೋಜನೆಗೊಂಡಿರುವ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳಲ್ಲಿನ ಅರ್ಹ ಕುರಿಗಾಹಿ ಸದಸ್ಯರಿಗೆ ಮಾತ್ರ.<br>➢ ಕರ್ನಾಟಕ ಸಹಕಾರ ಕುರಿ ಮತ್ತು ಮೇಕೆಗಳ ಸಾಕಾಣಿಕೆದಾರರ ಸಂಘಗಳ ಮಹಾ ಮಂಡಳಗಳ ಜೊತೆಗೆ ಷೇರುದಾರರಾಗಿ ನೊಂದಣಿಯಾಗಿರುವ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳಲ್ಲಿನ ಅರ್ಹ ಕುರಿಗಾಹಿ ಸದಸ್ಯರಿಗೆ ಮಾತ್ರ.<br>➢ ಸದರಿ ಕಾರ್ಯಕ್ರಮದಲ್ಲಿ ಸರ್ಕಾರದ ನಿಯಮಗಳಂತೆ ಮಹಿಳೆಯರಿಗೆ (ಶೇ.33.3), ವಿಶೇಷ ಚೇತನರಿಗೆ (ಶೇ.3) ಆದ್ಯತೆ ನೀಡಲಾಗುವುದು.<br>➢ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಫಲಾನುಭವಿಗಳು RD No. ಇರುವ ಜಾತಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಹೊಂದಿರಬೇಕು.<br>➢ ಅರ್ಜಿದಾರರು FRUITS ತಂತ್ರಾಂಶದಲ್ಲಿ ನೊಂದಾಯಿಸಿರಬೇಕು.<br><br>ಸದರಿ ಯೋಜನೆಗೆ ಸಂಬಂಧಿಸಿದ ಸರ್ಕಾರಿ ಆದೇಶದ ಪ್ರತಿಯನ್ನು **ಅನುಬಂಧ**ದಲ್ಲಿ ನೀಡಿದೆ. |

**ಪಸಂಮೀ 206 ಸಲೆವಿ 2025**

**(ಕೆ. ವೆಂಕಟೇಶ್)**
**ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು**

AHF/ 78 /AHP/2022 -AHF_SEC_b_AH_Animal Husbandry Fisheries sec

Q.No. 977 ಅನುಬಂಧ

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- 2022-23ನೇ ಸಾಲಿನಲ್ಲಿ ಅಮೃತ ಸ್ವಾಭಿಮಾನಿ ಕುರಿಗಾಹಿ ಯೋಜನೆಯಡಿ 20+1 ಕುರಿ / ಮೇಕೆ ಘಟಕಗಳನ್ನು ರಾಜ್ಯದಲ್ಲಿನ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳಲ್ಲಿನ ಅರ್ಹ 20,000 ಪ್ರತಿ ಕುರಿಗಾಹಿ ಸದಸ್ಯರುಗಳಿಗೆ ನೀಡಲಾಗುವ ಯೋಜನೆಗೆ ಅನುಸರಿಸಬೇಕಾದ ಮಾರ್ಪಾಡಿತ ಮಾರ್ಗಸೂಚಿಗಳಿಗೆ ಅನುಮೋದನೆ ನೀಡುವ ಕುರಿತು.

ಓದಲಾಗಿದೆ:-
1. ಸರ್ಕಾರದ ಆದೇಶ ಸಂಖ್ಯೆ:ಪಸಂಮೀ 78 ಪಪಾಯೋ 2022, ದಿನಾಂಕ:29.10.2022.
2. ಸರ್ಕಾರ ಆದೇಶ ಸಂಖ್ಯೆ:ಪಸಂಮೀ 78 ಪಪಾಯೋ 2022, ದಿನಾಂಕ:10.01.2023.
3. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ ಇವರ ಪತ್ರ ಸಂಖ್ಯೆ:ಕಕುಉಅನಿನಿ/ಅಸ್ವಾಕುಯೋ/2022-23, ದಿನಾಂಕ:15.02.2023.

*******

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಂತೆ 2022-23ನೇ ಸಾಲಿನಲ್ಲಿ ಅಮೃತ ಸ್ವಾಭಿಮಾನಿ ಕುರಿಗಾಹಿ ಯೋಜನೆಯಡಿ 20+1 ಕುರಿ / ಮೇಕೆ ಘಟಕಗಳನ್ನು ರಾಜ್ಯದಲ್ಲಿನ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳಲ್ಲಿನ ಅರ್ಹ 20,000 ಪ್ರತಿ ಕುರಿಗಾಹಿ ಸದಸ್ಯರುಗಳಿಗೆ ನೀಡಲಾಗುವ ಘಟಕ ವೆಚ್ಚ ರೂ.1,75,000/-ಗಳ ಪೈಕಿ ರೂ.175.00 ಕೋಟಿ (ಶೇ.50 ರಷ್ಟು) ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮ (NCDC), ಸಹಕಾರ ಇಲಾಖೆ, ಭಾರತ ಸರ್ಕಾರದ ವತಿಯಿಂದ ಸಾಲ, ರೂ.87.5 ಕೋಟಿ (ಶೇ.25 ರಷ್ಟು) ಸಹಾಯಧನ + ಶೇ.5 ರಷ್ಟು ಆಡಳಿತಾತ್ಮಕ ವೆಚ್ಚ ಸೇರಿ ಒಟ್ಟು ರೂ.92.00 ಕೋಟಿ ರಾಜ್ಯ ಸರ್ಕಾರದ ವತಿಯಿಂದ ಅನುದಾನ ಮತ್ತು ರೂ.87.5 ಕೋಟಿ (ಶೇ.25) ರಷ್ಟು ಫಲಾನುಭವಿಗಳ ವಂತಿಗೆ / ಬ್ಯಾಂಕ್ ಸಾಲ ಮೂಲಕ ಒಟ್ಟಾರೆಯಾಗಿ ಅಂದಾಜು ರೂ.354.50 (ಮೂರು ನೂರ ಐವತ್ತ ನಾಲ್ಕು ಕೋಟಿ ಐವತ್ತು ಲಕ್ಷ ರೂಪಾಯಿಗಳು ಮಾತ್ರ) ಕೋಟಿಗಳ ವೆಚ್ಚದಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸಲು ಸಚಿವ ಸಂಪುಟದ ಘಟನೋತ್ತರ ಅನುಮೋದನೆ ಪಡೆಯುವ ಷರತ್ತಿಗೊಳಪಟ್ಟು ತಾತ್ವಿಕ ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಲಾಗಿತ್ತು. ಸದರಿ ಆದೇಶದಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸುವ ಸಂಬಂಧ ವಿವರವಾದ ಮಾರ್ಗಸೂಚಿಗಳನ್ನು ಪ್ರತ್ಯೇಕವಾಗಿ ಹೊರಡಿಸಲಾಗುವುದು ಎಂದು ತಿಳಿಸಲಾಗಿತ್ತು. ಈ ರೀತಿ ಹೊರಡಿಸಲಾಗಿರುವ ಕ್ರಮಕ್ಕೆ ಸಚಿವ ಸಂಪುಟದ ನಿರ್ಣಯ ಸಂಖ್ಯೆ: ಸಿ-685/2022, ದಿನಾಂಕ:08-12-2022 ರನ್ವಯ ಘಟನೋತ್ತರ ಅನುಮೋದನೆಯನ್ನು ಪಡೆಯಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಆದೇಶಲ್ಲಿ 2022-23ನೇ ಸಾಲಿನಲ್ಲಿ ಅಮೃತ ಸ್ವಾಭಿಮಾನಿ ಕುರಿಗಾಹಿ ಯೋಜನೆಯನ್ನು ರಾಜ್ಯದಲ್ಲಿರುವ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳ ಅರ್ಹ 20 ಸಾವಿರ ಸದಸ್ಯರುಗಳಿಗೆ 20+1 ಕುರಿ/ಮೇಕೆ ಘಟಕಗಳನ್ನು ರೂ.354.50 (ಮೂರು ನೂರ ಐವತ್ತ ನಾಲ್ಕು ಕೋಟಿ ಐವತ್ತು ಲಕ್ಷ ರೂಪಾಯಿಗಳು ಮಾತ್ರ) ಕೋಟಿಗಳ ವೆಚ್ಚದಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸಲು ಆದೇಶಿಸಿ ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದಲ್ಲಿರುವ ಮಾರ್ಗಸೂಚಿಗಳನ್ವಯ ಅನುಷ್ಠಾನಗೊಳಿಸಲು ಅನುಮೋದನೆ ನೀಡಿ ಆದೇಶಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (3) ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ, ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಕರ್ನಾಟಕ ಸಹಕಾರ ಕುರಿ ಮತ್ತು ಮೇಕೆಗಳ ಸಾಕಾಣಿಕೆದಾರರ ಸಂಘಗಳ ಮಹಾಮಂಡಳ, ಬೆಂಗಳೂರು ಇವರುಗಳೊಂದಿಗೆ ಸರ್ಕಾರದ ಕಾರ್ಯದರ್ಶಿ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ ಇವರ ಸಮ್ಮುಖದಲ್ಲಿ ದಿನಾಂಕ:14.02.2023 ರಂದು ನಡೆದ ಅಮೃತ ಸ್ವಾಭಿಮಾನಿ ಕುರಿಗಾಹಿ ಯೋಜನೆ ಅನುಷ್ಠಾನ ಕುರಿತ ಸಭೆಯಲ್ಲಿ ಚರ್ಚಿತವಾದಂತೆ ಮೇಲೆ ಓದಲಾದ ಕ್ರಮ ಸಂಖ್ಯೆ:2 ರ ಆದೇಶದೊಂದಿಗಿನ ಕೆಲವು ಮಾರ್ಗಸೂಚಿಗಳನ್ನು ಮಾರ್ಪಡಿಸಲು ತೀರ್ಮಾನಿಸಲಾಗಿದ್ದು, ಅದರಂತೆ ತಯಾರಿಸಿದ ಮಾರ್ಪಾಡಿತ ಮಾರ್ಗಸೂಚಿಗಳನ್ನು ಹೊರಡಿಸಿ ಯೋಜನೆಯನ್ನು ಸುಗಮವಾಗಿ ಅನುಷ್ಠಾನಗೊಳಿಸಲು ಅನುವುಮಾಡಿಕೊಡಬೇಕೆಂದು ಕೋರಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು ಅಮೃತ ಸ್ವಾಭಿಮಾನಿ ಕುರಿಗಾಹಿ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಅವಶ್ಯಕವಾದ ಮಾರ್ಗಸೂಚಿಗಳನ್ನು ಮಾರ್ಪಾಡು ಮಾಡಲು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಇ-ಪಸಂಮೀ 78 ಪಪಾಯೋ 2022,**
**ಬೆಂಗಳೂರು, ದಿನಾಂಕ:22.02.2023.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ 2022-23ನೇ ಸಾಲಿನಲ್ಲಿ ಅಮೃತ ಸ್ವಾಭಿಮಾನಿ ಕುರಿಗಾಹಿ ಯೋಜನೆಯನ್ನು ರಾಜ್ಯದಲ್ಲಿರುವ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳ ಅರ್ಹ 20 ಸಾವಿರ ಸದಸ್ಯರುಗಳಿಗೆ 20+1 ಕುರಿ/ಮೇಕೆ ಘಟಕಗಳನ್ನು ರೂ.354.50 (ಮೂರು ನೂರ ಐವತ್ತ ನಾಲ್ಕು ಕೋಟಿ ಐವತ್ತು ಲಕ್ಷ ರೂಪಾಯಿಗಳು ಮಾತ್ರ) ಕೋಟಿಗಳ ವೆಚ್ಚದಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸುವುದಕ್ಕೆ ಸಂಬಂಧಿಸಿದಂತೆ ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದಲ್ಲಿರುವ ಮಾರ್ಪಾಡಿತ ಮಾರ್ಗಸೂಚಿಗಳನ್ವಯ ಅನುಷ್ಠಾನಗೊಳಿಸಲು ಅನುಮೋದನೆ ನೀಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕಾವ್ಯ ಹೆಚ್.ಎನ್.)
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ),
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,
(ಪಶುಸಂಗೋಪನೆ)

ಗೆ:

1. ಮಹಾಲೇಖಪಾಲರು (ಎ ಮತ್ತು ಇ) ಕರ್ನಾಟಕ, ಬೆಂಗಳೂರು.
2. ಮಾನ್ಯ ಮುಖ್ಯ ಮಂತ್ರಿಯವರ ಪ್ರಧಾನ ಕಾರ್ಯದರ್ಶಿಯವರ, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಕರ್ನಾಟಕ ಸರ್ಕಾರ ವಿಧಾನ ಸೌಧ ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ / ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ / ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆ.
5. ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು.
6. ನಿಬಂಧಕರು, ಸಹಕಾರ ಸಂಘಗಳ ಇಲಾಖೆ, ಅಲಿ ಆಸ್ಕರ್ ರಸ್ತೆ, ಬೆಂಗಳೂರು.
7. ನಿರ್ದೇಶಕರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು.
8. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ, ಹೆಬ್ಬಾಳ, ಬೆಂಗಳೂರು.

9. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಕರ್ನಾಟಕ ಸಹಕಾರ ಕುರಿ ಮತ್ತು ಮೇಕೆಗಳ ಸಾಕಾಣಿಕೆದಾರರ ಸಂಘಗಳ ಮಹಾ ಮಂಡಳ, ಹೆಬ್ಬಾಳ, ಬೆಂಗಳೂರು.
10. ಖಜಾನಾಧಿಕಾರಿಗಳು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
11. ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ (ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ಇವರ ಮುಖಾಂತರ)
12. ಎಲ್ಲಾ ಜಿಲ್ಲೆಗಳ ಜಿಲ್ಲಾ ಅನುಷ್ಠಾನಾಧಿಕಾರಿಗಳು, ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ (ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ ಇವರ ಮುಖಾಂತರ)
13. ಉಪ ನಿರ್ದೇಶಕರು, ಗಣಕ ಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ಬೆಂಗಳೂರು.

**ಪ್ರತಿಗಳು:-**

1. ಮಾನ್ಯ ಪಶುಸಂಗೋಪನೆ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿಯವರ ಪತ್ರಾಂಕಿತ ಆಪ್ತ ಸಹಾಯಕರು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ.
3. ಸರ್ಕಾರದ ಜಂಟಿ ಕಾರ್ಯದರ್ಶಿಯವರ ಪತ್ರಾಂಕಿತ ಆಪ್ತ ಸಹಾಯಕರು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ.
4. ಕಂಟ್ರೋಲ್ ರೂಂ ಕಂ-24/7 ಹೆಲ್ಪ್ ಲೈನ್ (ಸಹಾಯವಾಣಿ) ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಹೆಬ್ಬಾಳ, ಬೆಂಗಳೂರು.
5. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

## ಅನುಬಂಧ

## ಸರ್ಕಾರದ ಆದೇಶ ಸಂಖ್ಯೆ:ಪಸಂಮೀ 78 ಪಪಾಯೋ 2022, ಬೆಂಗಳೂರು ದಿನಾಂಕ:22.02.2023 ರ ಆದೇಶಕ್ಕೆ ಸಂಬಂಧಿಸಿದಂತೆ ಮಾರ್ಗಸೂಚಿಗಳು

1. **ಯೋಜನೆ:**

ಅಮೃತ ಸ್ವಾಭಿಮಾನಿ ಕುರಿಗಾಹಿ ಯೋಜನೆಯಡಿ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳಲ್ಲಿನ ಅರ್ಹ 20000 ಕುರಿಗಾಹಿ ಸದಸ್ಯರಿಗೆ 20+1 ಕುರಿ / ಮೇಕೆ ಘಟಕಗಳನ್ನು ರೂ.1,75,000/- ಗಳ ವೆಚ್ಚದಲ್ಲಿ ಒದಗಿಸುವುದರ ಮೂಲಕ ಆರ್ಥಿಕವಾಗಿ ರಾಜ್ಯದಲ್ಲಿನ ಕುರಿಗಾಹಿಗಳನ್ನು ಸದೃಢಗೊಳಿಸುವುದು ಮತ್ತು ರಾಜ್ಯದಲ್ಲಿ ಸಮಗ್ರವಾಗಿ ಕುರಿ / ಮೇಕೆ ಅಭಿವೃದ್ಧಿಗೊಳಿಸುವ ಯೋಜನೆಯಾಗಿದೆ. ಸದರಿ ಯೋಜನೆಯನ್ನು ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ ಹಾಗೂ ಕರ್ನಾಟಕ ಸಹಕಾರ ಕುರಿ ಮತ್ತು ಮೇಕೆಗಳ ಸಾಕಾಣಿಕೆದಾರರ ಸಂಘಗಳ ಮಹಾ ಮಂಡಳ ರವರುಗಳ ಸಹಯೋಗದೊಂದಿಗೆ ಅನುಷ್ಠಾನಗೊಳಿಸುವುದು.

2. **ಯೋಜನೆಯ ಉದ್ದೇಶ:**

- ಕುರಿ/ಮೇಕೆ ಸಾಕಾಣಿಕೆಯಿಂದ ಕುರಿಗಾಹಿಗಳ ಆರ್ಥಿಕ ಅಭಿವೃದ್ಧಿ.
- ರಾಜ್ಯದಲ್ಲಿ ಕುರಿ ಮತ್ತು ಮೇಕೆಗಳ ಅಭಿವೃದ್ಧಿ.
- ಕುರಿ / ಮೇಕೆ ಮಾಂಸದ ಉತ್ಪಾದನೆ ಅಧಿಕಗೊಳಿಸುವುದು.

3. **ಯೋಜನೆಯ ಮೊತ್ತ:**

ರಾಜ್ಯದಲ್ಲಿನ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳಲ್ಲಿನ 20,000 ಅರ್ಹ ಕುರಿಗಾಹಿ ಸದಸ್ಯರುಗಳಿಗೆ 20+1 ಕುರಿ / ಮೇಕೆ ಘಟಕಗಳನ್ನು ಒಟ್ಟಾರೆ ರೂ.354.50 ಕೋಟಿಗಳ ಯೋಜನಾ ವೆಚ್ಚದಲ್ಲಿ ಕೆಳಗಿನಂತೆ ಅನುಷ್ಠಾನಗೊಳಿಸುವುದು.

| ಕ್ರ ಸಂ | ವಿವರಗಳು | ಯೋಜನೆಯ ಅನುಷ್ಠಾನಕ್ಕೆ ಮಾದರಿ ನೆರವು | ಪ್ರತಿ ಘಟಕಕ್ಕೆ ಮೊತ್ತ ರೂಗಳಲ್ಲಿ | ಯೋಜನೆಯ ಅನುಷ್ಠಾನಕ್ಕೆ ಒಟ್ಟು (20000 ಫಲಾನುಭವಿಗಳಿಗೆ) ಕೋಟಿ ರೂ.ಗಳಲ್ಲಿ |
|---|---|---|---|---|
| 1 | ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮದ ವತಿಯಿಂದ ಸಾಲ (NCDC) | 50% | 87500 | 175.00 |
| 2 | ಸರ್ಕಾರದ ಸಹಾಯಧನ ರೂ.87.50 ಕೋಟಿ ಮತ್ತು ಆಡಳಿತಾತ್ಮಕ ವೆಚ್ಚ (5%) ರೂ.4.50 ಕೋಟಿ | 25% | 43750 | 92.00 |
| 3 | ಫಲಾನುಭವಿಯ ವಂತಿಕೆ / ಬ್ಯಾಂಕ್ ಸಾಲ | 25% | 43750 | 87.50 |
| | | ಒಟ್ಟು | **175000** | **354.50** |

ಸರ್ಕಾರದಿಂದ ಸದರಿ ಯೋಜನೆಯ ಅನುಷ್ಠಾನಕ್ಕಾಗಿ ಬಿಡುಗಡೆಯಾಗುವ ಆಡಳಿತಾತ್ಮಕ ವೆಚ್ಚದ ಅನುದಾನವನ್ನು ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತದೊಂದಿಗೆ ಸಂಯೋಜನೆಗೊಂಡಿರುವ ಸಂಘಗಳು ಹಾಗೂ ಕರ್ನಾಟಕ ಸಹಕಾರ ಕುರಿ ಮತ್ತು ಮೇಕೆಗಳ ಸಾಕಾಣಿಕೆದಾರರ ಸಂಘಗಳ ಮಹಾ ಮಂಡಳಗಳ ಜೊತೆಗೆ ಷೇರುದಾರರಾಗಿ ನೋಂದಣಿಯಾಗಿರುವ ಸಂಘಗಳಿಗೆ ಯೋಜನೆಯ ಸಮರ್ಪಕ ಅನುಷ್ಠಾನ, ಮೇಲ್ವಿಚಾರಣೆ ಮತ್ತು ಸಾಲ ಮರು ಪಾವತಿಗೆ ಸಂಬಂಧಪಟ್ಟಂತೆ ನಿಯಮಾನುಸಾರ ಕಾಲಕಾಲಕ್ಕೆ ಆಡಳಿತಾತ್ಮಕ ವೆಚ್ಚದ ಅನುದಾನವನ್ನು ಬಿಡುಗಡೆ ಮಾಡಲಾಗುವುದು.

4. ಯೋಜನೆಯ ಅನುಷ್ಠಾನದ ಅವಧಿ:

ಸದರಿ ಯೋಜನೆಯನ್ನು ಪ್ರಸಕ್ತ 2022-23ನೇ ಸಾಲಿನಲ್ಲಿ ಅನುಷ್ಠಾನಗೊಳಿಸುವುದು.

5. ಯೋಜನೆಯ ವ್ಯಾಪ್ತಿ:

ರಾಜ್ಯದಲ್ಲಿರುವ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳಿರುವ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗುವುದು.

6. ಅರ್ಹ ಫಲಾನುಭವಿಗಳು:

- ಸಂಘವು ಸಹಕಾರ ಸಂಘಗಳ ಕಾಯ್ದೆ 1959 ರ ಅನುಗುಣವಾಗಿ ಕರ್ನಾಟಕ ಸರ್ಕಾರದ ಸಹಕಾರ ಇಲಾಖೆಯಲ್ಲಿ ನೋಂದಣಿ ಯಾಗಿರಬೇಕು.
- ಸಂಘವು, ತನ್ನ ಸಭೆಗಳನ್ನು ನಿರಂತರವಾಗಿ ನಡೆಸಿರಬೇಕು ಹಾಗೂ ವಾರ್ಷಿಕ ಸಾಮಾನ್ಯ ಸಭೆ (AGM) ಹಾಗೂ ಚುನಾವಣಾ ಬೈಲಾ ಹಾಗೂ ಕಾಯ್ದೆಗನುಗುಣವಾಗಿ ನಡೆಸಿರತಕ್ಕದ್ದು.
- ಸಂಘದ ಇತ್ತೀಚಿನ ಮೂರು ವರ್ಷಗಳ ಲೆಕ್ಕ ಪರಿಶೋಧನೆ ಆಗಿರಬೇಕು ಹಾಗೂ ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಸಹಕಾರ ಇಲಾಖೆ ದೃಢೀಕರಣ ಹೊಂದಿರಬೇಕು.
- ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತದೊಂದಿಗೆ ಸಂಯೋಜನೆಗೊಂಡಿರುವ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳಲ್ಲಿನ ಅರ್ಹ ಕುರಿಗಾಹಿ ಸದಸ್ಯರಿಗೆ ಮಾತ್ರ.
- ಕರ್ನಾಟಕ ಸಹಕಾರ ಕುರಿ ಮತ್ತು ಮೇಕೆಗಳ ಸಾಕಾಣಿಕೆದಾರರ ಸಂಘಗಳ ಮಹಾ ಮಂಡಳಗಳ ಜೊತೆಗೆ ಷೇರುದಾರರಾಗಿ ನೋಂದಣಿಯಾಗಿರುವ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳಲ್ಲಿನ ಅರ್ಹ ಕುರಿಗಾಹಿ ಸದಸ್ಯರಿಗೆ ಮಾತ್ರ.
- ಸಂಘವು ತನ್ನ ಎಲ್ಲಾ ಸದಸ್ಯರ ಹಾಗೂ ಅವರು ಹೊಂದಿರುವ ಕುರಿ / ಮೇಕೆಗಳ ಕುರಿತಂತೆ ಎಲ್ಲಾ ವಿವರಗಳನ್ನು ಇಲಾಖೆಯು ಒದಗಿಸುವ ನಿಗದಿತ ನಮೂನೆಯಲ್ಲಿ ನೀಡತಕ್ಕದ್ದು.
- ಸದರಿ ಕಾರ್ಯಕ್ರಮದಲ್ಲಿ ಸರ್ಕಾರದ ನಿಯಮಗಳಂತೆ ಮಹಿಳೆಯರಿಗೆ (ಶೇ.33.3), ವಿಶೇಷ ಚೇತನರಿಗೆ (ಶೇ.3) ಆದ್ಯತೆ ನೀಡಲಾಗುವುದು.
- ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಫಲಾನುಭವಿಗಳು ಜಾತಿ ಪ್ರಮಾಣ ಪತ್ರವನ್ನು ಹೊಂದಿರಬೇಕು (ಪ್ರಮಾಣ ಪತ್ರದಲ್ಲಿ ಆರ್ ಡಿ ನಂ: ಇರಬೇಕು)
- ಅರ್ಜಿದಾರರು ಕಡ್ಡಾಯವಾಗಿ FRUITS ತಂತ್ರಾಂಶದಲ್ಲಿ ನೋಂದಾಯಿಸಿರಬೇಕು.
- ಕುರಿ, ಮೇಕೆಗಳ ಮಾರಾಟ ವ್ಯವಸ್ಥೆ ಕಲ್ಪಿಸುವ NeML Marketing Platform (Online) ನಲ್ಲಿ ನೋಂದಣಿಯಾಗಿರಬೇಕು.
- ಒಂದು ಕುಟುಂಬಕ್ಕೆ ಒಂದೇ ಅರ್ಜಿಯನ್ನು ಸಲ್ಲಿಸತಕ್ಕದ್ದು, ಒಂದಕ್ಕಿಂತ ಹೆಚ್ಚಿನ ಅರ್ಜಿಗಳನ್ನು ಸಲ್ಲಿಸಿದ್ದಲ್ಲಿ ಅಂತಹ ಕುಟುಂಬದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

7. ಫಲಾನುಭವಿಗಳು ಅರ್ಜಿ ಜೊತೆ ಲಗತ್ತಿಸಿಬೇಕಾದ ದಾಖಲಾತಿಗಳು:

- ನಿಗದಿತ ನಮೂನೆಯಲ್ಲಿ ಭಾವಚಿತ್ರದೊಂದಿಗೆ ಅರ್ಜಿ.
- ಸಂಘದ ಇತ್ತೀಚಿನ ಮೂರು ವರ್ಷಗಳ ಲೆಕ್ಕ ಪರಿಶೋಧನೆ ಆಗಿರಬೇಕು ಹಾಗೂ ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಸಹಕಾರ ಇಲಾಖೆ ದೃಢೀಕರಣ ಹೊಂದಿರಬೇಕು.
- ನೋಂದಾಯಿತ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘದಲ್ಲಿ ಸದಸ್ಯರಾಗಿರುವ ಬಗ್ಗೆ ಸಂಬಂಧಿಸಿದ ಸಂಘದ ಕಾರ್ಯದರ್ಶಿ ರವರಿಂದ ಪಡೆದ ಸದಸ್ಯತ್ವದ ದೃಢೀಕರಣ ಪತ್ರದ ಪ್ರತಿ.
- ಪರಿಶಿಷ್ಟಜಾತಿ/ಪರಿಶಿಷ್ಟಪಂಗಡಕ್ಕೆ ಸೇರಿದ್ದಲ್ಲಿ ಜಾತಿ ಪ್ರಮಾಣ ಪತ್ರದ ದೃಢೀಕೃತ ಪ್ರತಿ.
- ವಿಶೇಷ ಚೇತನರಾಗಿದ್ದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಕ್ಷಮ ಪ್ರಾಧಿಕಾರವು ನೀಡಿರುವ ದೃಢೀಕರಣ ಪ್ರಮಾಣ ಪತ್ರ.

...3

8. ಯೋಜನೆಯ (20+1) ಕುರಿ / ಮೇಕೆ ಘಟಕ ವೆಚ್ಚದ ವಿವರಗಳು:–

| | | |
|---|---|---|
| 1. | 20 ಹೆಣ್ಣು ಕುರಿ/ಮೇಕೆಗಳಿಗೆ (ಪ್ರತಿ ಹೆಣ್ಣು ಕುರಿ/ಮೇಕೆಗೆ–ರೂ.7,500) (ಕನಿಷ್ಠ 9 ತಿಂಗಳಿಂದ 18 ತಿಂಗಳ ವಯಸ್ಸು) | ರೂ.1,50,000 |
| 2. | ಒಂದು ಸುಧಾರಿತ ತಳಿ ಟಗರು / ಹೋತಕ್ಕೆ (ಕನಿಷ್ಠ 18 ತಿಂಗಳ ವಯಸ್ಸು) | ರೂ.10,000 |
| 3. | * ಕುರಿ / ಮೇಕೆಗಳ ವಿಮೆ, (ಒಂದು ವರ್ಷಕ್ಕೆ) (2.75% of animal cost + GST) ಗರಿಷ್ಠ ಮೊತ್ತದಲ್ಲಿ | ರೂ.5500 |
| 4. | 1) ಸಾಗಾಣಿಕೆ ವೆಚ್ಚ – ರೂ.200/– ಪ್ರತಿ ಕುರಿ/ಮೇಕೆ (ರೂ.4200)<br>2) ಕುರಿ, ಮೇಕೆಗಳಿಗೆ ಬೇಕಾಗುವ ಆಹಾರ ಮತ್ತು ನೀರಿನ ಸಲಕರಣೆಗಳು – ರೂ.1150<br>3) ಸಮತೋಲನ ಆಹಾರ – ರೂ.4200/– | ರೂ.9500 |
| | ಒಟ್ಟು | ರೂ.1,75,000 |

9. ರಾಜ್ಯ ಮಟ್ಟದ ಮೇಲ್ವಿಚಾರಣಾ ಸಮಿತಿ:

ಸದರಿ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಸಂಬಂಧ ರಾಜ್ಯ ಉನ್ನತ ಮಟ್ಟದ ಮೇಲ್ವಿಚಾರಣಾ ಸಮಿತಿಯನ್ನು ರಚಿಸುವ ಬಗ್ಗೆ ಪ್ರತ್ಯೇಕವಾಗಿ ಅದೇಶವನ್ನು ಹೊರಡಿಸಲಾಗುವುದು.

10. ಫಲಾನುಭವಿಯ ಆಯ್ಕೆ ವಿಧಾನ:

- ನಿಗಮದ ಜಿಲ್ಲಾ ಅನುಷ್ಠಾನಾಧಿಕಾರಿಗಳು ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಲು ಯೋಜನೆಯ ಬಗ್ಗೆ ವ್ಯಾಪಕ ಪ್ರಚಾರ (ಪತ್ರಿಕಾ ಪ್ರಕಟಣೆ) ನೀಡಿ ಜಿಲ್ಲೆಯ ಕುರಿ ಮತ್ತು ಉಣ್ಣೆ ಉತ್ಪಾದಕ ಸಹಕಾರ ಸಂಘಗಳ ಮೂಲಕ ನಿಗದಿತ ನಮೂನೆಯಲ್ಲಿ ಅರ್ಹ ಫಲಾನುಭವಿಗಳಿಂದ ಅರ್ಜಿಯನ್ನು ಆಹ್ವಾನಿಸುವುದು.
- ರಾಜ್ಯದಲ್ಲಿರುವ ಒಟ್ಟು ಕುರಿ ಮತ್ತು ಉಣ್ಣೆ ಉತ್ಪಾದಕ ಸಹಕಾರ ಸಂಘಗಳ ಪೈಕಿ ಪ್ರತಿ ಜಿಲ್ಲೆಯಲ್ಲಿರುವ ಸಹಕಾರ ಸಂಘಗಳ ಸಂಖ್ಯೆಗೆ ಅನುಗುಣವಾಗಿ ಜಿಲ್ಲಾವಾರು ಗುರಿ ನಿಗಧಿ ಪಡಿಸುವುದು.
- ಆಯಾ ಜಿಲ್ಲೆಯಲ್ಲಿರುವ ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತದೊಂದಿಗೆ ಸಂಯೋಜನೆಗೊಂಡಿರುವ ಸಂಘಗಳು ಹಾಗೂ ಕರ್ನಾಟಕ ಸಹಕಾರ ಕುರಿ ಮತ್ತು ಮೇಕೆಗಳ ಸಾಕಾಣಿಕೆದಾರರ ಸಂಘಗಳ ಮಹಾ ಮಂಡಳಗಳ ಜೊತೆಗೆ ಷೇರುದಾರರಾಗಿ ನೋಂದಣಿಯಾಗಿರುವ ಸಂಘಗಳು ಜಿಲ್ಲಾವಾರು ನಿಗದಿಪಡಿಸುವ ಗುರಿಗಳನ್ವಯ ಸದಸ್ಯರುಗಳನ್ನು ಆಯ್ಕೆ ಮಾಡುವುದು ಹಾಗೂ ಫಲಾನುಭವಿಗಳ ಪಟ್ಟಿಯನ್ನು ನಿಗಧಿತ ನಮೂನೆ ಮತ್ತು ಅಗತ್ಯ ದಾಖಲಾತಿಗಳೊಂದಿಗೆ ಸಂಬಂಧಪಟ್ಟ ಆಯಾ ಜಿಲ್ಲೆಯ ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತದ ಜಿಲ್ಲಾ ಅನುಷ್ಠಾನಾಧಿಕಾರಿಗಳಿಗೆ ಸಲ್ಲಿಸುವುದು.
- ಜಿಲ್ಲಾವಾರು ಗುರಿಗಳನ್ನು ಆಯಾ ಜಿಲ್ಲೆಯ ಹೋಬಳಿವಾರು ಅಸ್ತಿತ್ವದಲ್ಲಿರುವ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳ ಸದಸ್ಯರ ಸಂಖ್ಯೆಗೆ ಅನುಗುಣವಾಗಿ ಸರ್ಕಾರದ ನಿಯಮಾವಳಿಗಳ ಅನ್ವಯ ವರ್ಗವಾರು ಗುರಿಯನ್ನು ಮರು ನಿಗಧಿ ಪಡಿಸುವುದು
- ಯೋಜನೆಯ ಅನುಷ್ಠಾನಕ್ಕಾಗಿ ಸಂಘದ ಸದಸ್ಯರುಗಳಿಗೆ NCDC ಯಿಂದ ಪಡೆದ ಸಾಲ ಮತ್ತು ಬಡ್ಡಿ ವಸೂಲಾತಿಗೆ ಸಂಬಂಧಿಸಿದಂತೆ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳು ಕಡ್ಡಾಯವಾಗಿ ಸಂಬಂಧ ಪಟ್ಟ ಜಿಲ್ಲಾ ಅನುಷ್ಠಾನಾಧಿಕಾರಿಗಳು ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತದೊಂದಿಗೆ ಕರಾರು ಒಪ್ಪಂದವನ್ನು ಮಾಡಿಕೊಳ್ಳತಕ್ಕದ್ದು.

| ಜಿಲ್ಲಾಮಟ್ಟದ ಫಲಾನುಭವಿ ಆಯ್ಕೆ ಸಮಿತಿ | | |
|---|---|---|
| 1 | ಸಂಬಂಧಿಸಿದ ಜಿಲ್ಲೆಯ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು | ಅಧ್ಯಕ್ಷರು |
| 2 | ಆಯಾ ಜಿಲ್ಲೆಯ ನಿರ್ದೇಶಕರು, ಕರ್ನಾಟಕ ಸಹಕಾರ ಕುರಿ ಮತ್ತು ಮೇಕೆಗಳ ಸಾಕಾಣಿಕೆ ದಾರರ ಸಂಘಗಳ ಮಹಾ ಮಂಡಳ. | ಸದಸ್ಯರು |
| 3 | ಸಂಬಂಧಿಸಿದ ಜಿಲ್ಲೆಯ ಉಪ ನಿರ್ದೇಶಕರು (ಆಡಳಿತ) ಪಶು ಪಾಲನಾ ಮತ್ತು ಪಶು ವೈದ್ಯ ಸೇವಾ ಇಲಾಖೆ. | ಸದಸ್ಯರು |
| 4 | ಸಂಬಂಧಿಸಿದ ಜಿಲ್ಲೆಯ ವ್ಯವಸ್ಥಾಪಕರು ಲೀಡ್ ಬ್ಯಾಂಕ್. | ಸದಸ್ಯರು |
| 5 | ಸಂಬಂಧಿಸಿದ ಜಿಲ್ಲೆಯ ಸಹಕಾರ ಸಂಘಗಳ ಉಪನಿಬಂಧಕರು ಸಹಕಾರ ಇಲಾಖೆ. | ಸದಸ್ಯರು |
| 6 | ಜಿಲ್ಲಾ ಅನುಷ್ಠಾನಾಧಿಕಾರಿಗಳು, ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ. | ಸದಸ್ಯ ಕಾರ್ಯದರ್ಶಿ |

**11. ಸಮಿತಿಯ ಕಾರ್ಯವ್ಯಾಪ್ತಿ:**

1. ಜಿಲ್ಲಾ ಮಟ್ಟದ ಫಲಾನುಭವಿಗಳ ಆಯ್ಕೆ ಸಮಿತಿ ಸಭೆಯನ್ನು ಸದಸ್ಯ ಕಾರ್ಯದರ್ಶಿಗಳಾದ ನಿಗಮದ ಜಿಲ್ಲಾ ಮಟ್ಟದ ಅನುಷ್ಠಾನಾಧಿಕಾರಿಗಳು ಕರೆದು, ಸ್ವೀಕರಿಸಿದ ಪ್ರವರ್ಗವಾರು ಅರ್ಹ ಫಲಾನುಭವಿಗಳ ಪಟ್ಟಿಯನ್ನು ಯೋಜನೆಯ ಮಾರ್ಗಸೂಚಿಗಳನ್ವಯ ನಿಯಮಾನುಸಾರ ಪರಿಶೀಲಿಸಿ ಫಲಾನುಭವಿಗಳನ್ನು ಜಿಲ್ಲಾ ಮಟ್ಟದ ಆಯ್ಕೆ ಸಮಿತಿ ಮುಂದೆ ಮಂಡಿಸುವುದು.
2. ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಸೇರಿದ ಫಲಾನುಭವಿಗಳಿಗೆ ಸರ್ಕಾರದ ನಿಯಮಗಳನ್ವಯ ಮೀಸಲಾತಿ ನೀಡುವುದು.
3. ಜಿಲ್ಲಾವಾರು ನಿಗದಿಪಡಿಸಿದ ಪ್ರವರ್ಗವಾರು ಗುರಿಗಳನ್ವಯ ಫಲಾನುಭವಿಗಳ ಆಯ್ಕೆಯನ್ನು ಸಮಿತಿಯು ಅಂತಿಮಗೊಳಿಸುವುದು.
4. ಯೋಜನೆಯಲ್ಲಿ ಲೋಪದೋಷಗಳು ಕಂಡು ಬಂದರೆ ಅಂತಹವುಗಳನ್ನು ನಿವಾರಿಸಲು ಸಲಹೆ ನೀಡುವುದು.
5. ಗುಣಮಟ್ಟದ ಕುರಿ/ಮೇಕೆಗಳ ಘಟಕಗಳನ್ನು ಖರೀದಿಸಲು ಸಲಹೆ ನೀಡುವುದು.
6. ಫಲಾನುಭವಿಯ ನಿರಾಸಕ್ತಿ, ಇನ್ನಿತರೆ ಕಾರಣಗಳಿಂದ ಸರ್ಕಾರದಿಂದ ಬಿಡುಗಡೆ ಆದ ಅನುದಾನವು ಬಳಕೆಯಾಗದ ಸಂದರ್ಭದಲ್ಲಿ ಅನುದಾನಕ್ಕೆ ಅನುಗುಣವಾಗಿ ಪರ್ಯಾಯ ಫಲಾನುಭವಿಗಳನ್ನು ಆಯ್ಕೆ ಮಾಡುವುದು.

**12. ಸದಸ್ಯ ಕಾರ್ಯದರ್ಶಿಯವರ ಕಾರ್ಯವ್ಯಾಪ್ತಿ:-**

ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಮುಕ್ತಾಯವಾದ ನಂತರ ಸಂಬಂಧಿಸಿದ ಸ್ಥಳೀಯ ಪಶುಪಾಲನಾ ಇಲಾಖೆಯ ಅಧಿಕಾರಿಗಳ ಸಹಯೋಗದೊಂದಿಗೆ ಯೋಜನೆಯನ್ನು ಅನುಷ್ಠಾನಗೊಳಿಸಲು ಅಗತ್ಯ ಕ್ರಮವಹಿಸುವುದು.

**13. ಯೋಜನಾ ಅನುಷ್ಠಾನ ವಿಧಾನ:-**

1. ರಾಜ್ಯದಲ್ಲಿರುವ ಒಟ್ಟು ಕುರಿ ಮತ್ತು ಉಣ್ಣೆ ಉತ್ಪಾದಕ ಸಹಕಾರ ಸಂಘಗಳ ಪೈಕಿ ಪ್ರತಿ ಜಿಲ್ಲೆಯಲ್ಲಿರುವ ಸಹಕಾರ ಸಂಘಗಳ ಸಂಖ್ಯೆಗೆ ಅನುಗುಣವಾಗಿ ಜಿಲ್ಲಾವಾರು ಗುರಿ ನಿಗಧಿ ಪಡಿಸುವುದು.
2. ಜಿಲ್ಲಾವಾರು ಗುರಿಗಳನ್ನು ಆಯಾ ಜಿಲ್ಲೆಯ ಹೋಬಳಿವಾರು ಅಸ್ತಿತ್ವದಲ್ಲಿರುವ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳ ಸದಸ್ಯರ ಸಂಖ್ಯೆಗೆ ಅನುಗುಣವಾಗಿ ಸರ್ಕಾರದ ನಿಯಮಾವಳಿಗಳ ಅನ್ವಯ ವರ್ಗವಾರು ಗುರಿಯನ್ನು ಮರು ನಿಗಧಿ ಪಡಿಸುವುದು.

3. ನಿಗಮದ ಜಿಲ್ಲಾನುಷ್ಠಾನಾಧಿಕಾರಿ ಆಯಾ ತಾಲ್ಲೂಕಿಗೆ ನಿಗಧಿಯಾದ ಗುರಿಗಳ ಪೈಕಿ ಅದಕ್ಕೆ ತಕ್ಕಂತೆ ಅನುದಾನವನ್ನು ಮರು ಹಂಚಿಕೆ ಮಾಡಿ, ಆಯಾ ಜಿಲ್ಲೆಯಲ್ಲಿರುವ ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತದೊಂದಿಗೆ ಸಂಯೋಜನೆಗೊಂಡಿರುವ ಸಂಘಗಳು ಹಾಗೂ ಕರ್ನಾಟಕ ಸಹಕಾರ ಕುರಿ ಮತ್ತು ಮೇಕೆಗಳ ಸಾಕಾಣಿಕೆದಾರರ ಸಂಘಗಳ ಮಹಾ ಮಂಡಳಗಳ ಜೊತೆಗೆ ಷೇರುದಾರರಾಗಿ ನೋಂದಣಿಯಾಗಿರುವ ಸಂಘಗಳ ಮುಖಾಂತರ ಅರ್ಜಿಗಳನ್ನು ಆಹ್ವಾನಿಸುವುದು.
4. ಜಿಲ್ಲಾ ಮಟ್ಟದ ಫಲಾನುಭವಿಗಳ ಆಯ್ಕೆ ಸಮಿತಿ ಸಭೆಯನ್ನು ಸದಸ್ಯ ಕಾರ್ಯದರ್ಶಿಗಳಾದ ನಿಗಮದ ಜಿಲ್ಲಾ ಮಟ್ಟದ ಅನುಷ್ಠಾನಾಧಿಕಾರಿಗಳು ಕರೆದು, ಸ್ವೀಕರಿಸಿದ ಪ್ರವರ್ಗವಾರು ಅರ್ಹ ಫಲಾನುಭವಿಗಳ ಪಟ್ಟಿಯನ್ನು ಯೋಜನೆಯ ಮಾರ್ಗಸೂಚಿಗಳನ್ವಯ ನಿಯಮಾನುಸಾರ ಪರಿಶೀಲಿಸಿ ಅರ್ಹ ಫಲಾನುಭವಿಗಳನ್ನು ಜಿಲ್ಲಾ ಮಟ್ಟದ ಆಯ್ಕೆ ಸಮಿತಿ ಮುಂದೆ ಮಂಡಿಸುವುದು.
5. ಉಪ ನಿರ್ದೇಶಕರು ಜಿಲ್ಲೆಗೆ ನಿಗದಿಯಾದ ಗುರಿಗಳನ್ನು ತಾಲ್ಲೂಕು ಸಹಾಯಕ ನಿರ್ದೇಶಕರು ಮುಖ್ಯ ಪಶುವೈದ್ಯಾಧಿಕಾರಿ (ಆಡಳಿತ) ಇವರಿಂದ ಮಾಹಿತಿ ಪಡೆದು ತಾಲ್ಲೂಕುವಾರು ಜಿಲ್ಲಾ ಲೀಡ್ ಬ್ಯಾಂಕ್ ಮುಖಾಂತರ ಬ್ಯಾಂಕ್‌ವಾರು ಗುರಿ ನಿಗಧಿಪಡಿಸಲು ಕ್ರಮ ವಹಿಸುವುದು.
6. ಫಲಾನುಭವಿಗಳಿಂದ ಸ್ವೀಕರಿಸಿದಂತಹ ವಂತಿಗೆ ಹಣವನ್ನು ಪ್ರತ್ಯೇಕ ಬ್ಯಾಂಕ್ ಖಾತೆಗೆ ಜಮೆ ಮಾಡಿಸಿ, ನಂತರ ಸಹಾಯಧನವನ್ನು ಅದೇ ಖಾತೆಗೆ ಜಮಾ ಮಾಡಿ ಕುರಿ / ಮೇಕೆ ಘಟಕವನ್ನು ಮಾರಾಟ ಮಾಡಿರುವವರಿಗೆ ಪಾವತಿಸಲು ಅನುಷ್ಠಾನಾಧಿಕಾರಿಗಳು ಕ್ರಮವಹಿಸುವುದು.
7. ಮುಖ್ಯ ಪಶುವೈದ್ಯಾಧಿಕಾರಿಗಳು (ಆಡಳಿತ) ವಿಳಂಬವಿಲ್ಲದೇ ಆಯ್ಕೆಯಾದ ಫಲಾನುಭವಿಗಳ ಅರ್ಜಿಯನ್ನು ಅಗತ್ಯ ದಾಖಲೆಗಳೊಂದಿಗೆ ಸಂಬಂಧಿಸಿದ ಪಶುವೈದ್ಯಾಧಿಕಾರಿಗಳ ಮುಖಾಂತರ ಸಾಲ ಮಂಜೂರಾತಿಗಾಗಿ ಬ್ಯಾಂಕ್‌ಗಳಿಗೆ ಸಲ್ಲಿಸುವುದು.
8. ಈ ಯೋಜನೆಯನ್ನು ರಾಷ್ಟ್ರೀಕೃತ ಬ್ಯಾಂಕ್‌ಗಳು, ವಾಣಿಜ್ಯ ಬ್ಯಾಂಕ್ ಹಾಗೂ ಸಹಕಾರಿ ಸಂಘಗಳ ಮುಖಾಂತರವು ಸಹ ಸಾಲ ಮಂಜೂರಾತಿಯೊಂದಿಗೆ ಅನುಷ್ಠಾನಗೊಳಿಸುವುದು.
9. ಸಹಾಯಕ ನಿರ್ದೇಶಕರು ಅಥವಾ ಅನುಷ್ಠಾನಾಧಿಕಾರಿಗಳು ಆಯ್ಕೆಯಾದ ಫಲಾನುಭವಿಗಳ ಸಹಾಯಧನವನ್ನು ಆಯಾ ಬ್ಯಾಂಕ್‌ಗಳಿಗೆ ಬಿಡುಗಡೆಗೊಳಿಸಿ ಯೋಜನೆ ಅನುಷ್ಠಾನಗೊಳಿಸುವುದು.
10. ಫಲಾನುಭವಿಗಳಿಗೆ ಖರೀದಿಸಿದ ಕುರಿ/ಮೇಕೆ ಘಟಕಗಳಿಗೆ ಯುಐಡಿ ಸಂಖ್ಯೆ ಇರುವ ಟ್ಯಾಗ್‌ಗಳನ್ನು ಅಳವಡಿಸಿ, ಫಲಾನುಭವಿ, ಮಾರಾಟಗಾರ, ಬ್ಯಾಂಕ್ ಪ್ರತಿನಿಧಿ ಮತ್ತು ಅನುಷ್ಠಾನಾಧಿಕಾರಿ ಕುರಿ / ಮೇಕೆ ಘಟಕ ಇರುವ ಫೋಟೋವನ್ನು ಎಲ್ಲಾ ವಿವರಗಳೊಂದಿಗೆ ಯೋಜನಾ ವಹಿಯಲ್ಲಿ ದಾಖಲಿಸುವುದು.
11. ಫಲಾನುಭವಿಗಳಿಗೆ ಕುರಿ/ಮೇಕೆ ಶೆಡ್ ನಿರ್ಮಾಣಕ್ಕಾಗಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ. (MGNREGA) ಯೋಜನೆಯಡಿ ಅವಕಾಶ ಕಲ್ಪಿಸಲು ಸ್ಥಳೀಯ ಗ್ರಾಮ ಪಂಚಾಯಿತಿ ಪಿ.ಡಿ.ಓ.ಗಳಿಗೆ ಹಾಗೂ ತಾಲ್ಲೂಕು ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಮಾಹಿತಿ ನೀಡುವುದು.
12. ಈ ಯೋಜನೆಯಡಿಯ ಫಲಾನುಭವಿಗಳ ಕುರಿ /ಮೇಕೆ ಘಟಕಗಳಿಗೆ ವಿಮೆಗೊಳಪಡಿಸಲು ಕ್ರಮ ವಹಿಸುವುದು.
13. ಆಯ್ಕೆಯಾದ ಫಲಾನುಭವಿಯು ಯೋಜನೆಯ ಅನುಷ್ಠಾನಕ್ಕೆ ಮೊದಲು ಮರಣ ಹೊಂದಿದಲ್ಲಿ ಅವರ ಅಧಿಕೃತ ವಾರಸುದಾರರಿಗೆ ಈ ಯೋಜನೆಯ ಸವಲತ್ತನ್ನು ನೀಡಲು ಕ್ರಮ ವಹಿಸುವುದು.
14. ಅನುಷ್ಠಾನಾಧಿಕಾರಿಗಳು ಯೋಜನೆಯನ್ನು ಸಂಪೂರ್ಣವಾಗಿ ಅನುಷ್ಠಾನಗೊಳಿಸಿದ ಕೂಡಲೇ ಹಣ ಬಳಕೆ ಪ್ರಮಾಣ ಪತ್ರ ಹಾಗೂ ಪ್ರಗತಿ ವಿವರಗಳನ್ನು ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ಹಾಗೂ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತಕ್ಕೆ ಸಲ್ಲಿಸಲು ತಪ್ಪದೇ ಕ್ರಮ ವಹಿಸುವುದು.

...6

14. ಯೋಜನಾ ಅನುಷ್ಠಾನಾಧಿಕಾರಿಗಳು:

ಸ್ಥಳೀಯ ಅಧಿಕಾರಿಗಳಾದ ಮುಖ್ಯ ಪಶುವೈದ್ಯಾಧಿಕಾರಿಗಳು (ಆಡಳಿತ) / ವ ಪಶುವೈದ್ಯಾಧಿಕಾರಿಗಳು / ಹಿರಿಯ ಪಶುವೈದ್ಯಾಧಿಕಾರಿಗಳು ಅಥವಾ ಪಶುವೈದ್ಯಾಧಿಕಾರಿಗಳು ಯೋಜನೆಯ ಅನುಷ್ಠಾನಾಧಿಕಾರಿಗಳಾಗಿರುತ್ತಾರೆ ಮತ್ತು ಈ ಕೆಳಗಿನ ಎಲ್ಲಾ ದಾಖಲೆ ಪತ್ರಗಳ ಮೂಲ ಪ್ರತಿಗಳನ್ನು ನಿರ್ವಹಿಸುವುದು ಅವರ ಜವಾಬ್ದಾರಿ ಆಗಿರುತ್ತದೆ.

1. ಸಾಲ ಮರುಪಾವತಿ ಕರಾರು ಪತ್ರ
2. FRUITS ID ದೃಢೀಕರಣ ಪತ್ರ
3. ಫಲಾನುಭವಿಯಿಂದ ಸಹಾಯಧನ ಸ್ವೀಕೃತಿ ಪತ್ರ
4. ಫಲಾನುಭವಿಯೊಂದಿಗೆ ಕುರಿ / ಮೇಕೆ ಘಟಕಗಳ ಭಾವಚಿತ್ರ–With GPS
5. ಕುರಿ / ಮೇಕೆ ಘಟಕಗಳ ಖರೀದಿ ನಗದು ರಸೀದಿ.
6. ಜಾನುವಾರು ಆರೋಗ್ಯ ದೃಢೀಕರಣ ಪತ್ರ, ವಿಮಾ ಪಾಲಿಸಿ
7. ಸಾಗಾಣಿಕೆ ವೆಚ್ಚದ ಬಿಲ್ (ರಶೀದಿ)
8. ಪಶು ಆಹಾರ ಖರೀದಿ ಬಿಲ್‌ಗಳು.
9. ಕುರಿ, ಮೇಕೆಗಳಿಗೆ ಬೇಕಾಗುವ ಆಹಾರ ಮತ್ತು ನೀರಿನ ಸಲಕರಣೆಗಳ ಖರೀದಿ ಬಿಲ್
10. ಇತರೆ ದಾಖಲಾತಿಗಳು

15. ಕುರಿ / ಮೇಕೆ ಘಟಕಗಳ ಖರೀದಿ ಸಮಿತಿ:

1. ಫಲಾನುಭವಿಯ ಗ್ರಾಮ ವ್ಯಾಪ್ತಿಯ ಅನುಷ್ಠಾನ ಅಧಿಕಾರಿಗಳಾದ ಸ್ಥಳೀಯ ಮುಖ್ಯ ಪಶುವೈದ್ಯಾಧಿಕಾರಿಗಳು (ಆಡಳಿತ) / ಮುಖ್ಯ ಪಶುವೈದ್ಯಾಧಿಕಾರಿಗಳು / ಹಿರಿಯ ಪಶುವೈದ್ಯಾಧಿಕಾರಿಗಳು ಅಥವಾ ಪಶುವೈದ್ಯಾಧಿಕಾರಿಗಳು
2. ಬ್ಯಾಂಕ್ ಅಧಿಕಾರಿ / ಪ್ರತಿನಿಧಿ (ಬ್ಯಾಂಕುಗಳಿಂದ ಸಾಲ ಪಡೆದ ಯೋಜನೆಗಳಿಗೆ ಮಾತ್ರ)
3. ಫಲಾನುಭವಿ
4. ಮಾರಾಟಗಾರ

16. ಯೋಜನೆ ಮೇಲ್ವಿಚಾರಣೆ:

1. ಅನುಷ್ಠಾನಾಧಿಕಾರಿಗಳು ಕುರಿ / ಮೇಕೆ ಘಟಕಗಳ ಖರೀದಿ ಸಮಿತಿ ಮೂಲಕ ಕುರಿ / ಮೇಕೆ ಘಟಕಗಳನ್ನು ಖರೀದಿ ಮಾಡುವುದು.
2. ಅನುಷ್ಠಾನಾಧಿಕಾರಿಗಳು ಸಂಬಂಧಿಸಿದ ಮೂಲ ದಾಖಲೆ ಪತ್ರಗಳನ್ನು ತಮ್ಮ ಕಛೇರಿಯಲ್ಲಿ ನಿರ್ವಹಣೆ ಮಾಡುವುದು.
3. ಅನುಷ್ಠಾನಾಧಿಕಾರಿಗಳು ಯೋಜನೆಯಲ್ಲಿ ನೀಡಿದ ಕುರಿ /ಮೇಕೆ ಘಟಕಗಳ ಆರೋಗ್ಯ ರಕ್ಷಣೆ, ಲಸಿಕೆ ಕಾರ್ಯಕ್ರಮ ಕೈಗೊಳ್ಳುವುದು.
4. ವಿತರಿಸಿದ ಕುರಿ / ಮೇಕೆ ಘಟಕಗಳ ಅನುಪಾಲನೆ ವಹಿ (Asset Register) ನಿರ್ವಹಿಸುವುದು
5. ಅನುಷ್ಠಾನಾಧಿಕಾರಿಗಳು ಹಣ ವಿನಿಯೋಗ ದೃಢೀಕರಣ ಪತ್ರಗಳನ್ನು ಬ್ಯಾಂಕ್‌ಗಳಿಂದ ಪಡೆದು, ದೃಢೀಕರಿಸಿ ತಾಲ್ಲೂಕಿನ ಮುಖ್ಯ ಪಶುವೈದ್ಯಾಧಿಕಾರಿ (ಆಡಳಿತ) ಮೂಲಕ ಉಪ ನಿರ್ದೇಶಕರಿಗೆ ಸಲ್ಲಿಸುವುದು.
6. ಉಪ ನಿರ್ದೇಶಕರುಗಳಿಂದ ಯೋಜನೆಯ ಅನುಷ್ಠಾನದ ಬಗ್ಗೆ ಹಾಗೂ ಯೋಜನೆಯ ಅನುಸರಣೆ / ಪ್ರಗತಿಯ ಬಗ್ಗೆ ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತದ ಜಿಲ್ಲಾ ಅನುಷ್ಠಾನಾಧಿಕಾರಿಗಳು ಕಾಲಕಾಲಕ್ಕೆ ವರದಿಯನ್ನು ಪಡೆದುಕೊಂಡು, ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಕರ್ನಾಟಕ ಸಹಕಾರ ಕುರಿ ಮತ್ತು ಮೇಕೆಗಳ ಸಾಕಾಣಿಕೆದಾರರ ಸಂಘಗಳ ಮಹಾ ಮಂಡಳ, ಹೆಬ್ಬಾಳ, ಬೆಂಗಳೂರು ರವರಿಗೆ ತಪ್ಪದೇ ಸಲ್ಲಿಸುವುದು.

7. ಜಿಲ್ಲೆಯ ಉಪ ನಿರ್ದೇಶಕರು ಅನುಷ್ಠಾನಗೊಂಡ ಯೋಜನೆಯ ಪ್ರತಿ ತಾಲ್ಲೂಕಿನ ಕನಿಷ್ಠ ಶೇ.2 ರಷ್ಟು ಹಾಗೂ ತಾಲ್ಲೂಕು ಸಹಾಯಕ ನಿರ್ದೇಶಕರು ಶೇ.5 ರಷ್ಟು ಫಲಾನುಭವಿಗಳ ಮನೆಗೆ ಭೇಟಿ ನೀಡಿ ಅನುಷ್ಠಾನದ ಮತ್ತು ಕುರಿ / ಮೇಕೆ ಘಟಕಗಳ ನಿರ್ವಹಿಸಿರುವ ಬಗ್ಗೆ ಪರಿಶೀಲನೆ ಮಾಡಬೇಕು.
8. ಅನುಷ್ಠಾನಾಧಿಕಾರಿಗಳು ಕಾರ್ಯಕ್ರಮ ಅನುಷ್ಠಾನಗೊಂಡ ನಂತರ ಕನಿಷ್ಠ ಪ್ರತಿ ಮಾಹೆ ಒಮ್ಮೆ ಖುದ್ದು ಭೇಟಿ ನೀಡಿ ಕುರಿ / ಮೇಕೆ ಘಟಕಗಳ ಪರಿಶೀಲನೆ ಮಾಡುವುದು ಮತ್ತು ಈ ಕುರಿತು ಕುರಿ / ಮೇಕೆ ಘಟಕಗಳ ಅನುಸರಣೆ ವಹಿಯಲ್ಲಿ ನಮೂದಿಸುವುದು.

**17. <u>ಕ್ರಮಗಳು:</u>**

1. ಕುರಿ / ಮೇಕೆ ಘಟಕಗಳ ಖರೀದಿ ಸಮಯದಲ್ಲಿ ಆಯಾ ಪ್ರದೇಶಕ್ಕೆ ಯೋಗ್ಯವಿರುವ ಕುರಿ /ಮೇಕೆ ತಳಿಯ ಖರೀದಿಗೆ ಆದ್ಯತೆ ನೀಡುವುದು.
2. ಕುರಿ / ಮೇಕೆ ಘಟಕಗಳ ಖರೀದಿ ಸಮಿತಿಯು ಫಲಾನುಭವಿಗಳಿಗೆ ಕುರಿ /ಮೇಕೆ ಘಟಕಗಳನ್ನು ಕನಿಷ್ಠ 100 ಕಿ.ಮೀ ಅಥವಾ ಹೆಚ್ಚು ದೂರದಲ್ಲಿರುವ ಎಪಿಎಂಸಿ ಮಾರುಕಟ್ಟೆ / ಜಾನುವಾರು ಸಂತೆಗಳು / NeML ಸಂಸ್ಥೆ ರವರ ಮಾರ್ಕೆಟಿಂಗ್ ಪ್ಲಾಟ್‌ಫಾರಂ (ಆನ್‌ಲೈನ್) ಮುಖಾಂತರ ಖರೀದಿಸುವುದು (ಜಿ.ಪಿ.ಎಸ್ ಫೋಟೋ ಲಗತ್ತಿಸುವುದು)
3. ಮಾರಾಟ ಮಾಡುವ ರೈತರಿಂದ ಕಡ್ಡಾಯವಾಗಿ ಸ್ಥಳೀಯ ಪಶುವೈದ್ಯಾಧಿಕಾರಿಗಳಿಂದ ಲಸಿಕೆ ದೃಢೀಕರಣ ಪಡೆದ ನಂತರವಷ್ಟೇ ಖರೀದಿ ಮಾಡುವುದು.
4. ನಿಗಮದ ಎಲ್ಲ ಜಿಲ್ಲಾ ಅನುಷ್ಠಾನಾಧಿಕಾರಿಗಳು ಯೋಜನೆಯ ಸವಲತ್ತು ಪಡೆಯುವ ಪ್ರತಿ ಫಲಾನುಭವಿಗಳಿಗೆ ಕಡ್ಡಾಯವಾಗಿ ಕಿಸಾನ್ ಕ್ರೆಡಿಟ್ ಕಾರ್ಡ್ ಸೌಲಭ್ಯ ದೊರಕುವಂತೆ ಕ್ರಮವಹಿಸುವುದು.

Kavya H N.
(ಕಾವ್ಯ ಹೆಚ್.ಎನ್.)
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ),
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,
(ಪಶುಸಂಗೋಪನೆ)
22/02

**ಅಮೃತ ಸ್ವಾಭಿಮಾನಿ ಕುರಿಗಾಹಿ ಯೋಜನೆಯನ್ನು ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ ಹಾಗೂ ಕರ್ನಾಟಕ ಸಹಕಾರ ಕುರಿ ಮತ್ತು ಮೇಕೆಗಳ ಸಾಕಾಣಿಕೆದಾರರ ಸಂಘಗಳ ಮಹಾ ಮಂಡಳಗಳ ಸಹಯೋಗದೊಂದಿಗೆ ಅನುಷ್ಠಾನಗೊಳಿಸುವ ಸಂಬಂಧದ ಕರಾರು ಪತ್ರ**

1. ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತದಿಂದ ಅಮೃತ ಸ್ವಾಭಿಮಾನಿ ಕುರಿಗಾಹಿ ಯೋಜನೆಯಡಿ ನೀಡಿರುವ 20+1 ಕುರಿ/ಮೇಕೆಗಳನ್ನು ನಮ್ಮ ಸಂಘದ ಕಾರ್ಯ ವ್ಯಾಪ್ತಿಯ ಸದಸ್ಯರಿಗೆ ನೀಡಿ ಯೋಜನೆಯ ಸದ್ಬಳಕೆ ಮಾಡಿಕೊಳ್ಳಲು ಒಪ್ಪಿರುತ್ತೇವೆ.
2. ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತದ ಮೂಲಕ NCDC ನೀಡಿರುವ ಸಾಲದ ಯೋಜನೆಯ ಮೊತ್ತ ರೂ.------------ಗಳನ್ನು ಸಂಬಂಧಿಸಿದ ಸಂಘವೇ ಬಡ್ಡಿ ಸಮೇತ ವಸೂಲಿ ಮಾಡಿ ನಿಗಮಕ್ಕೆ ಮರುಪಾವತಿಸಲು ಒಪ್ಪಿರುತ್ತೇವೆ.
3. ಸಾಲ ವಿತರಣೆಯಲ್ಲಿ ದುರುಪಯೋಗ ಕಂಡುಬಂದಲ್ಲಿ ಸಂಬಂಧಿಸಿದ ಸಂಘವೇ ಮರುಪಾವತಿಯ ಜವಾಬ್ದಾರಿಗೆ ಒಪ್ಪಿರುತ್ತದೆ.
4. ಸಂಬಂಧಿಸಿದ ಕುರಿ & ಉಣ್ಣೆ ಉತ್ಪಾದಕರ ಸಂಘದ ಗಮನಕ್ಕೆ ಬಾರದೆ ಯೋಜನೆಯಲ್ಲಿ ನೀಡಿರುವ ಕುರಿ/ಮೇಕೆಗಳನ್ನು ಫಲಾನುಭವಿಗಳು ಪರಬಾರೆ ಮಾಡಿದಲ್ಲಿ ಸಂಘವೇ ಜವಾಬ್ದಾರಿಯಾಗಿ ಸಾಲ ವಸೂಲಿ ಮಾಡತಕ್ಕದ್ದು.
5. NCDC ನೀಡಿರುವ ಸಾಲದ ಮೊತ್ತ ಹಾಗೂ ಫಲಾನುಭವಿಗಳು ಪಡೆದ ಒಟ್ಟು ಕುರಿ/ಮೇಕೆ ಸಂಖ್ಯೆ, ವಿಳಾಸ ನಮೂದಿಸಿ ಫಲಾನುಭವಿಯ ಸಹಿ ಪಡೆದ ರಿಜಿಸ್ಟರ್ ಪುಸ್ತಕವನ್ನು ಸಂಬಂಧಿಸಿದ ಸಂಘವು ನಿರ್ವಹಿಸಲು ಒಪ್ಪಿರುತ್ತದೆ.
6. ಪ್ರತಿ ಮಾಹೆಯಲ್ಲಿ ವಸೂಲಾದ ಸಾಲದ ಮೊತ್ತವನ್ನು ಪುಸ್ತಕದಲ್ಲಿ ನಮೂದಿಸಿದ ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ಜಿಲ್ಲಾ ಅನುಷ್ಠಾನಾಧಿಕಾರಿಗಳಿಗೆ ಸಲ್ಲಿಸುವುದು ಸಂಘದ ಜವಾಬ್ದಾರಿಯಾಗಿರುತ್ತದೆ.
7. ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ಮೇಲಾಧಿಕಾರಿಗಳು ಅಥವಾ ಜಿಲ್ಲಾ ಅನುಷ್ಠಾನಾಧಿಕಾರಿಗಳು / ಪಶುಪಾಲನಾ ಇಲಾಖೆಯ ಅಧಿಕಾರಿಗಳು ಬಂದಾಗ NCDC ರಿಜಿಸ್ಟರ್‌ಅನ್ನು ಪರಿಶೀಲನೆ ನಡೆಸಲು ಒದಗಿಸುವುದಕ್ಕೆ ಒಪ್ಪಿರುತ್ತದೆ.

**ಜಿಲ್ಲಾ ಅನುಷ್ಠಾನಾಧಿಕಾರಿಗಳು**
**ಕರ್ನಾಟಕ ಕುರಿ ಮತ್ತು ಉಣ್ಣೆ**
**ಅಭಿವೃದ್ಧಿ ನಿಗಮ ನಿಯಮಿತ**
**ಜಿಲ್ಲೆ.**

**ಕಾರ್ಯದರ್ಶಿ**
**ಕುರಿ & ಉಣ್ಣೆ ಉತ್ಪಾದಕರ ಸಂಘ**